MANUVIKASA
Success Stories

# ಮಹದೇವಿಯವರ ಬದುಕಿಗೆ ಹೊಸ ದಿಕ್ಕು ತೋರಿದ ಹೈನುಗಾರಿಕೆ ಉದ್ದಿಮೆ

***ಸಾರಾಂಶ:*** *ಅಡಿಕೆ ತೋಟದಲ್ಲಿ ವಕಾರಿ ಕೆಲಸ ಮಾಡುತ್ತಾ ದಿನಕ್ಕೆ 120 ರೂ. ದುಡಿಯುತ್ತಿದ್ದ ಮಹದೇವಿ ಗಣಪತಿ ಆರೇರ ಒಂದು ದಶಕದಲ್ಲಿ ದಿನಕ್ಕೆ 3200 ರೂ. ಸಂಪಾದಿಸುವ ಎತ್ತರಕ್ಕೆ ಬೆಳೆದಿದ್ದಾರೆ. ಕಠಿಣ ಪರಿಶ್ರಮ, ಮನೆ ಮಂದಿಯ ಸಹಕಾರದಿಂದ ಇದು ಸಾಧ್ಯವಾಗಿದೆ.*

**ಆರಂಭದ ಸಂಕಷ್ಟದ ವರ್ಷಗಳು:** ಮಹದೇವಿ ಅವರ ತಾಯಿ ಮನೆ ಮುಂಡಗೋಡು. 5ನೇ ತರಗತಿ ಓದಿದ್ದಾರೆ. ಮದುವೆಯಾಗಿ ಈಗಿನ ನೆರೆಬೈಲು ಗ್ರಾಮಕ್ಕೆ ಬಂದಾಗ ಆಗಷ್ಟೇ ಗಂಡನ ಮನೆಯಲ್ಲಿ ಹಿಸ್ಸೆಯಾಗಿತ್ತು. ಒಂದು ಗುಡಿಸಲು ಹಾಗೂ ಮುಕ್ಕಾಲು ಎಕರೆ ಜಮೀನು ಇವರ ಪಾಲಿಗೆ ಬಂದ ಆಸ್ತಿ. ಅದರಲ್ಲಿ ಭತ್ತ ಬೆಳೆಯುತ್ತಿದ್ದರು. ಅದೂ ವರ್ಷಕ್ಕೆ ಒಂದೇ ಬೆಳೆ. ಇಬ್ಬರು ಗಂಡು ಮಕ್ಕಳು, ಚಂದನ್ ಮತ್ತು ಅರವಿಂದ್ ಜನಿಸಿ ಸಂಸಾರ ದೊಡ್ಡದಾಯಿತು. ಆದರೆ ಆದಾಯ ಕಡಿಮೆ. ಮನೆ ವಾರ್ತೆಗೆ ಸಂಕಷ್ಟ.

**ಕೂಲಿಯಲ್ಲಿ ಹೈರಾಣ:** ಆಗ ಮಹದೇವಿಯವರಿಗೆ ತೋಚಿದ್ದು ಕೂಲಿ ಕೆಲಸ. ಆರಂಭದಲ್ಲಿ ಸುಮಾರು 2 ವರ್ಷ ತೋಟದ ಕೆಲಸಗಳಿಗೆ ಹೋಗುತ್ತಿದ್ದರು. ದಿನಕ್ಕೆ 120 ರೂ. ಕೂಲಿ. ನಂತರ ಅಡಿಕೆ ತೋಟದ ಕೆಲಸ ದೊರೆಯಿತು. ಅಲ್ಲಿ ವಾರ ಪೂರ್ತಿ ಕೆಲಸ. ಕೂಲಿಯ ಮೊತ್ತ 180 ರೂ. ಸಂತೆಯ ದಿನವಾದ ಮಂಗಳವಾರ ರಜೆ ದೊರೆಯುತ್ತಿತ್ತು. ಇದೂ ಸಹ ಸುಮಾರು 3 ವರ್ಷ ಮುಂದುವರಿಯಿತು. ಇದಾದ ಬಳಿಕ ಇವರ ಊರಿನ ಸಮೀಪದ ಕಲ್ಲು ಕ್ವಾರಿ ಒಂದರಲ್ಲಿ ಹೆಚ್ಚು ಕೂಲಿ ಇದೆಯೆಂದು ತಿಳಿದು ಗಂಡ ಹೆಂಡತಿ ಇಬ್ಬರೂ ಅಲ್ಲಿಗೆ ಹೋಗಲು ಶುರು ಮಾಡಿದರು. ಅಲ್ಲಿ ಹೆಣ್ಣುಮಕ್ಕಳಿಗೆ 200 ರೂ. ಹಾಗೂ ಗಂಡಸರಿಗೆ 220 ರೂ. ಕೂಲಿ ಕೊಡಲಾಗುತ್ತಿತ್ತು. ಆದರೆ ಸಮಯ ಪಾಲನೆ ಕಟ್ಟುನಿಟ್ಟು. ಮಹದೇವಿ ಮನೆಯಲ್ಲಿ ಮಕ್ಕಳಿಗೆ ಅಡುಗೆ ಮಾಡಿಟ್ಟು ಹೋಗುವಾಗ ಕೆಲವೊಮ್ಮೆ ತಡವಾಗುತ್ತಿತ್ತು. ಕೆಲವೊಮ್ಮೆ ಕ್ವಾರಿಯವರು ಗೇಟಿನಲ್ಲಿಯೇ ತಡೆದು ವಾಪಸ್ ಕಳಿಸಿದ್ದೂ ಇದೆ. ಆಗೆಲ್ಲಾ ತುಂಬಾ ದುಃಖ ಪಟ್ಟಿದ್ದಾರೆ. ಹಾಗೆಂದು ಕೆಲಸ ಬಿಡುವಂತೆಯೂ ಇಲ್ಲ. ಏಕೆಂದರೆ ದುಡಿಮೆ ಬೇಕೇ ಬೇಕು. ಸತತ 2 ವರ್ಷ ಅಲ್ಲಿ ಕೂಲಿ ಕೆಲಸ ಮಾಡಿದರು.



**ಅಮ್ಮ ಕೊಟ್ಟ ಹಸು:** ಕ್ವಾರಿಯಲ್ಲಿ ಕಲ್ಲು ಕಡಿದು ಹೈರಾಣಾಗುವ ಮಗಳ ಕಷ್ಟವನ್ನು ಕಂಡು ಮರುಗಿದ ಮಹದೇವಿಯವರ ಅಮ್ಮ ಒಂದು ಕರೆಯುವ ಹಸುವನ್ನು ತವರು ಮನೆ ಉಡುಗೊರೆಯಾಗಿ ಕೊಟ್ಟರು. ಆ ಒಂದು ಹಸುವಿನ ಜೊತೆಗೆ ಕೂಲಿ ಕೆಲಸದಲ್ಲಿ ಉಳಿತಾಯ ಮಾಡಿದ್ದ 10 ಸಾವಿರ ರೂ. ಮೊತ್ತದಲ್ಲಿ ಮತ್ತೊಂದು ಹಸು ಖರೀದಿ ಮಾಡಿದರು. ಇದು ನಡೆದಿದ್ದು 2013ನೇ ಇಸವಿಯಲ್ಲಿ. ಆ ವರ್ಷದ ಚೌತಿ ಹಬ್ಬದ ದಿವಸ ಮೊದಲ ಬಾರಿಗೆ ಎರಡೂ ಹಸುಗಳಿಂದ ಹಾಲು ಕರೆದು ಮಾರಾಟ ಶುರು ಮಾಡಿದರು.

ಬೆಳಿಗ್ಗೆ ಮತ್ತು ಸಂಜೆ ಸೇರಿ ಒಟ್ಟು 12 ಲೀಟರ್ ಹಾಲು ದೊರೆಯುತ್ತಿತ್ತು. ಬೆಳಿಗ್ಗೆಯ ಹಾಲನ್ನು ಮಾರಾಟ ಮಾಡಿ, ಸಂಜೆಯ ಹಾಲನ್ನು ಮನೆ ಬಳಕೆಗೆ ಇಟ್ಟುಕೊಳ್ಳುತ್ತಿದ್ದರು. ಸಣ್ಣವರಾಗಿದ್ದ ಮಕ್ಕಳಿಗೆ ಹಾಲು, ಮೊಸರು, ಮಜ್ಜಿಗೆಯ ಅವಶ್ಯಕತೆ ಇತ್ತು. ಆ ಎರಡು ಹಸುಗಳು ಮತ್ತು ಮಾರಾಟಕ್ಕೆ ದೊರೆತ 6 ಲೀಟರ್ ಹಾಲು ಮಹದೇವಿಯವರ ಬದುಕಿನ ದಿಕ್ಕನ್ನೇ ಬದಲಿಸಿದವು. ನಂತರ ಪ್ರತಿ ವರ್ಷ ಹಸುಗಳ ಸಂಖ್ಯೆಯನ್ನು ಹೆಚ್ಚಿಸುತ್ತಾ ಹೋದರು. ಈಗ ಅವರೊಬ್ಬ ಯಶಸ್ವೀ ಹೈನುಗಾರರಾಗಿ ಹೆಸರಾಗಿದ್ದಾರೆ.



**ಮನುವಿಕಾಸದ ಸಂಪರ್ಕ:** 2017ರಲ್ಲಿ ಶಿರಸಿಯ ಮನು ವಿಕಾಸ ಸಂಸ್ಥೆಯ ಪರಿಚಯವಾಗಿ ಆ ಸಂಸ್ಥೆ ರಚಿಸಿದ್ದ ಶ್ರೀ ಚೌಡೇಶ್ವರಿ ಮನುವಿಕಾಸ ಮಹಿಳಾ ಸ್ವಸಹಾಯ ಸಂಘದ ಸದಸ್ಯರಾದರು. ಸಂಘದಲ್ಲಿ 75 ಸಾವಿರ ರೂ. ಸಾಲ ಪಡೆದು ಮತ್ತೆ ಎರಡು ಹಸು ಖರೀದಿಸಿದರು. ಈಗ (ಜುಲೈ 2022) ಇವರ ಮನೆಯಲ್ಲಿ ಜರ್ಸಿ 13 ಹಸುಗಳು ಮತ್ತು 2 ನಾಟಿ ಜಾತಿಯ ಎಮ್ಮೆಗಳಿವೆ. ದಿನಕ್ಕೆ ಸರಾಸರಿ 80 ಲೀಟರ್ ಹಾಲು ಉತ್ಪತ್ತಿಯಾಗುತ್ತಿದೆ. ಹಾಲು ಸರಬರಾಜಿಗೆ ಶಿರಸಿ ಪಟ್ಟಣದಲ್ಲಿ ಹಲವು ಖಾಯಂ

ಗ್ರಾಹಕರನ್ನು ಗೊತ್ತು ಮಾಡಿಕೊಂಡಿದ್ದು ಅವರಿಗೆ ಪ್ರತಿನಿತ್ಯ ಹಾಲು ಹಾಕುತ್ತಾರೆ. ಪ್ರತಿ ಲೀಟರಿಗೆ ಪ್ರಸ್ತುತ 40 ರೂ. ಬೆಲೆ ದೊರೆಯುತ್ತಿದೆ.

**2021ರ ವರ್ಷದಲ್ಲಿ ಇವರ ಹಾಲಿನ ಆದಾಯ ಮತ್ತು ವೆಚ್ಚದ ಕೋಷ್ಟಕ ಇಲ್ಲಿದೆ;**

| ಉತ್ಪನ್ನ | ಪ್ರಮಾಣ | ಬೆಲೆ (ರೂ.) | ಒಟ್ಟು ಆದಾಯ (ರೂ.) | ಖರ್ಚು (ರೂ.) | ನಿವ್ವಳ ಆದಾಯ (ರೂ.) |
|---|---|---|---|---|---|
| ಹಾಲು | 28800 ಲೀ., | 40 | 11,52,000 | 8,40,000 | 4,47,000 |
| ಗೊಬ್ಬರ | 15 ಲೋಡ್ | 9000 | 1,35,000 | – | 1,35,000 |
| | | **ಒಟ್ಟು** | **12,87,000** | **8,40,000** | **5,82,000** |

ಹಾಲಿನ ಆದಾಯದಲ್ಲಿ ವೆಚ್ಚದ ಮೊತ್ತ ವಾರ್ಷಿಕ 8 ಲಕ್ಷವನ್ನು ಮೀರುತ್ತಿದೆ. ಇದಕ್ಕೆ ಕಾರಣ ಇವರಿಗೆ ಮೇವು ಬೆಳೆದುಕೊಳ್ಳಲು ಹೆಚ್ಚು ಸ್ವಂತ ಜಮೀನು ಇಲ್ಲದಿರುವುದರಿಂದ ಮೇವಿನ ಖರೀದಿಗೇ ಸುಮಾರು ಒಂದೂವರೆ ಲಕ್ಷ ವ್ಯಯಿಸುತ್ತಿದ್ದಾರೆ. ಅದನ್ನು ಹೊರತುಪಡಿಸಿದರೆ ಹಿಂಡಿ ಹಾಗೂ ಬೂಸಾ ಖರೀದಿಗೆ ಹೆಚ್ಚಿನ ಮೊತ್ತವನ್ನು ವಿನಿಯೋಗಿಸುತ್ತಿದ್ದಾರೆ. ಇವರ ಪ್ರಕಾರ ದಿನಕ್ಕೆ 10 ಲೀಟರ್ ಹಾಲು ಕರೆಯುವ ಒಂದು ಹಸುವಿಗೆ 10 ಕಿಲೋ ಹಿಂಡಿ ಮತ್ತು ಬೂಸಾ ಕೊಡಬೇಕು. ಹಾಗೆ ನೀಡಿದರೆ ಮಾತ್ರ ಅವುಗಳ ಹಾಲಿನ ಕರಾವು ಸುಸ್ಥಿರವಾಗಿರುತ್ತದೆ ಎನ್ನುತ್ತಾರೆ ಮಹದೇವಿ. ಹಸುಗಳ ದೇಹದಾರ್ಢ್ಯತೆಗೆ ಹಾಗೂ ಹಾಲಿನ ಇಳುವರಿಗೆ ಬೇರೆ–ಬೇರೆ ಹಿಂಡಿಗಳನ್ನೇ ಕೊಡುತ್ತಾರೆ. ಹಸಿ ಮೇವು ಮತ್ತು ಒಣ ಮೇವನ್ನು ಕತ್ತರಿಸಲು ಸುಲಭವಾಗುವಂತೆ ಮನು ವಿಕಾಸ ಸಂಸ್ಥೆಯು ಇವರಿಗೆ ಉಚಿತವಾಗಿ ಯಂತ್ರವೊಂದನ್ನು ನೀಡಿದೆ.

**ಗೊಬ್ಬರದ ಬೋನಸ್:** ಹಾಲಿನ ಜೊತೆಗೆ ಹೈನುಗಾರಿಕೆಯಿಂದ ಇವರಿಗೆ ದೊರೆಯುತ್ತಿರುವ ಮತ್ತೊಂದು ಪ್ರಮುಖ ಆದಾಯ ಗೊಬ್ಬರ ಮಾರಾಟ. ವರ್ಷಕ್ಕೆ 14ರಿಂದ 16 ಟ್ರ್ಯಾಕ್ಟರ್ ಲೋಡ್ ಗೊಬ್ಬರ ದೊರೆಯುತ್ತದೆ. ಅದನ್ನು ಒಬ್ಬರು ಖಾಯಂ ಗುತ್ತಿಗೆದಾರರಿಗೆ ಕೊಡುತ್ತಾರೆ. ಪ್ರತಿ ಲೋಡಿಗೆ ಪ್ರಸ್ತುತ 9 ಸಾವಿರ ರೂ. ಬೆಲೆ ಸಿಗುತ್ತಿದೆ. ಮೇಲಿನ ಕೋಷ್ಟಕ ಗಮನಿಸಿದಂತೆ ಇವರಿಗೆ ಗೊಬ್ಬರ ಮಾರಾಟದಿಂದಲೇ ವರ್ಷಕ್ಕೆ ಸುಮಾರು 1,40,000 ರೂ. ಆದಾಯ ಬರುತ್ತಿದೆ. ಇದೊಂದು ರೀತಿ ಬೋನಸ್ ಇದ್ದಂತೆ.

ಗಂಡ ಗಣಪತಿಯವರು ಮನೆ ಕಟ್ಟುವ ಕೆಲಸಕ್ಕೆ ಹೋಗುತ್ತಿದ್ದರು. ಮೂರು ವರ್ಷಗಳ ಹಿಂದೆ ಒಮ್ಮೆ ನಿರ್ಮಾಣಹಂತದಲ್ಲಿದ್ದ ಮನೆಯ ಮೇಲಿನಿಂದ ಬಿದ್ದುಬಿಟ್ಟರು. ತಲೆಗೆ ಬಹುದೊಡ್ಡ ಪೆಟ್ಟು. ಅವರು ಆ ಆಘಾತ ಹಾಗೂ ನೋವಿನಿಂದ ಮತ್ತೆ ಮಾಮೂಲಿ ವ್ಯಕ್ತಿಯಾಗಲು ವರ್ಷಗಳೇ ಹಿಡಿದವು. ಅವರ ಆಸ್ಪತ್ರೆ ವೆಚ್ಚವನ್ನೆಲ್ಲಾ ಭರಿಸಿದ್ದು ಹೈನುಗಾರಿಕೆಯೇ.

**ಗುಡಿಸಲಿನಿಂದ ಮುಕ್ತಿ:** ಹಾಲಿನ ಮಾರಾಟದಿಂದ ಸ್ವಲ್ಪ ಮಟ್ಟಿಗೆ ಉಳಿತಾಯ ಆರಂಭವಾದೊಡನೆ ಇವರಿಗೆ ಗುಡಿಸಲು ವಾಸದಿಂದ ಮುಕ್ತರಾಗಬೇಕೆಂಬ ಹಂಬಲ ಹೆಚ್ಚಿತು. ಗುಡಿಸಲಿದ್ದ ಸ್ಥಳದಲ್ಲಿಯೇ ಸುಸಜ್ಜಿತ ಮನೆ ಕಟ್ಟಿದರು. ಮನೆಯ ಮುಂಭಾಗ ಕೊಟ್ಟಿಗೆ ಮಾಡಿಕೊಂಡರು. ಹಸುಗಳ ಸಂಖ್ಯೆ ಹೆಚ್ಚಿದಂತೆಲ್ಲಾ ಈಗ ಕೊಟ್ಟಿಗೆಯನ್ನು ಮನೆಯ ಹಿಂಭಾಗಕ್ಕೂ ವಿಸ್ತರಿಸಿದ್ದಾರೆ.

**ಮಕ್ಕಳ ಸಹಕಾರ:** ಇದರ ಜೊತೆ–ಜೊತೆಗೇ ಮಕ್ಕಳ ಓದೂ ಸಹ ನಡೆಯುತ್ತಿದೆ. ಒಬ್ಬ ಮಗ ಪಿ.ಯು.ಸಿ ಓದುತ್ತಿದ್ದು ಮತ್ತೊಬ್ಬ ಐ.ಟಿ.ಐ ಡಿಪ್ಲೋಮಾ ಮುಗಿಸಿ ಈಗ ಹತ್ತಿರದ ಅರಣ್ಯ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದಾರೆ. ಹೈನುಗಾರಿಕೆ ಕೆಲಸಕ್ಕೆ ಇಬ್ಬರೂ ಮಕ್ಕಳ ಬೆಂಬಲವಿದೆ. ಕೆಲಸಕ್ಕೆ ಹೋಗುವುದಿರಲಿ, ಕಾಲೇಜಿಗೆ ಹೋಗುವುದಿರಲಿ ಕೊಟ್ಟಿಗೆ ಕೆಲಸ, ಕರಾವು ಮುಗಿಸಿಯೇ

ಹೋಗುತ್ತಾರೆ. ಹಾಲನ್ನು ಸರಬರಾಜು ಮಾಡುವ ಕೆಲಸ ಮಾತ್ರ ತಂದೆಯದು. ಬೆಳಿಗ್ಗೆ–ಸಂಜೆ ದ್ವಿಚಕ್ರ ವಾಹನದಲ್ಲಿ ಹೋಗಿ ಹಾಲು ಕೊಟ್ಟು ಬರುತ್ತಾರೆ.

**ಬಾವಿ ನಿರ್ಮಾಣ:** ಮನೆ ನಿರ್ಮಾಣದ ನಂತರ ಇವರಿಗೆ ತಕ್ಷಣ ಅಗತ್ಯವಾಗಿ ಕಂಡಿದ್ದು ಬಾವಿ ತೋಡಿಸುವುದು. ಇದಕ್ಕೆ ಕಾರಣ, ಹಸುಗಳಿಗೆ ಸ್ನಾನ ಮಾಡಿಸಲು, ನೀರು ಕುಡಿಸಲು ಹಾಗೂ ಕೊಟ್ಟಿಗೆ ತೊಳೆಯಲು ಅಪಾರ ಪ್ರಮಾಣದ ನೀರು ಬೇಕಿತ್ತು. ಮನೆಯ ಸಮೀಪ ಬಾವಿ ಇರಲಿಲ್ಲ. ಅರ್ಧ ಕಿಲೋಮೀಟರ್ ದೂರದ ಬಾವಿಯಿಂದ ನೀರನ್ನು ಹೊತ್ತು ತರುತ್ತಿದ್ದರು. ಬೇಸಿಗೆಯಲ್ಲಿ ನೀರಿನ ಕೊರತೆಯಾದಾಗ ಇನ್ನೂ ದೂರಕ್ಕೆ ಹೋಗಬೇಕಿತ್ತು. ಈ ಸಮಸ್ಯೆಯಿಂದ ಶಾಶ್ವತವಾಗಿ ಹೊರಬರಲು ಮನೆಯ ಬಳಿಯೇ ಒಂದು ಬಾವಿ ತೆಗೆಸಿದರು. 48 ಅಡಿ ಆಳಕ್ಕೇ ನೀರು ದೊರೆತಿದೆ. ಇದಕ್ಕೆ ಆದ ಒಟ್ಟು ವೆಚ್ಚ ರೂ. 1,20,000.

**ಗೋಬರ್ ಗ್ಯಾಸ್**: ಇನ್ನು, ಯತೇಚ್ಚ ಸಗಣಿ ದೊರೆಯುತ್ತಿದ್ದುದರಿಂದ ಗೋಬರ್ ಗ್ಯಾಸ್ ಘಟಕ ನಿರ್ಮಿಸಿಕೊಂಡಿದ್ದಾರೆ. ಇದಕ್ಕೆ ಮನುವಿಕಾಸ ಸಂಸ್ಥೆಯಿಂದ ತಾಂತ್ರಿಕ ಸಹಾಯ ಹಾಗೂ ಸಬ್ಸಿಡಿ ರೂಪದಲ್ಲಿ ರೂ. 30,000 ಮೊತ್ತ ನೀಡಲಾಗಿದೆ. ಘಟಕ ನಿರ್ಮಾಣವಾಗಿ ಐದು ವರ್ಷವಾಗಿದ್ದು ಈವರೆಗೆ ಯಾವ ಅಡಚಣೆಯೂ ಇಲ್ಲದೆ ಗ್ಯಾಸ್ ಲಭಿಸುತ್ತಿದೆ. ಘಟಕಕ್ಕೆ ಹಾಕುವ ಸಗಣಿಯು ಸ್ಲರಿಯಾಗಿ ಸೀದಾ ತಿಪ್ಪೆಗೆ ಹೋಗುವಂತೆ ವ್ಯವಸ್ಥೆ ಮಾಡಿರುವುದು ವಿಶೇಷ.



ಹೀಗೆ ಅತ್ಯಂತ ಯೋಜಿತ ರೀತಿಯಲ್ಲಿ ಇವರ ಕುಟುಂಬವು ಪ್ರತಿ ವರ್ಷ ಒಂದೊಂದು ಸೌಲಭ್ಯಗಳನ್ನು ಹೊಂದುತ್ತಾ ತಮ್ಮ ಬದುಕನ್ನು ನೇರ್ಪುಗೊಳಿಸಿಕೊಳ್ಳುತ್ತಿದೆ. 10 ವರ್ಷದ ಹಿಂದೆ ಕಂಡ ಮಹದೇವಿ–ಗಣಪತಿ ಅವರಿಗೂ ಈಗ ಕಾಣುತ್ತಿರುವ ಮಹದೇವಿ–ಗಣಪತಿ ಅವರಿಗೂ ಅಜಗಜಾಂತರವಿದೆ ಎನುತ್ತಾರೆ ಅಕ್ಕ–ಪಕ್ಕದವರು. ಆ ಮಾತು ನೂರಕ್ಕೆ ನೂರರಷ್ಟು ನಿಜ.

ಹಸುಗಳ ಸಂಖ್ಯೆಯನ್ನು ಇನ್ನಷ್ಟು ಹೆಚ್ಚಿಸಬೇಕು ಹಾಗೂ ಹಾಲಿನ ಉತ್ಪನ್ನಗಳನ್ನು ತಯಾರಿಸಬೇಕೆನ್ನುವುದು ಇವರ ಮುಂದಿನ ಯೋಜನೆಗಳಾಗಿವೆ. ತಮ್ಮದೇ ಬ್ರ್ಯಾಂಡಿನಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡಬೇಕೆಂಬ ಮಹದಾಸೆ ಇವರದಾಗಿದೆ. ಇದಕ್ಕಾಗಿ ಸೂಕ್ತ ತರಬೇತಿ ಹಾಗೂ ಅವಕಾಶಕ್ಕಾಗಿ ಕಾಯುತ್ತಿದ್ದಾರೆ.

**ಪ್ರಶಸ್ತಿಗಳ ಗರಿ:** ಇವರು ಬದುಕು ಕಟ್ಟಿಕೊಂಡ ರೀತಿಗೆ ಮಾರುಹೋಗಿ ಹಲವು ಸಂಘ–ಸಂಸ್ಥೆಗಳು ಪ್ರಶಸ್ತಿ ಹಾಗೂ ಗೌರವ ಸಲ್ಲಿಸಿವೆ. ಮುಖ್ಯವಾಗಿ ಮನು ವಿಕಾಸ ಮಹಿಳಾ ಸಮಾವೇಶದಲ್ಲಿ ಗೌರವ ಸನ್ಮಾನ, ಧರ್ಮಸ್ಥಳ ಸಂಘದಿಂದ ಸನ್ಮಾನ, ಶಿರಸಿಯ ಗಾಯಿತ್ರಿ ಗೆಳೆಯರ ಬಳಗದಿಂದ ಸನ್ಮಾನ ದೊರೆತಿದೆ.

**"**ಒಂದು ಕಾಲದಲ್ಲಿ ಅರ್ಧ ರೊಟ್ಟಿಗೂ ತುಟ್ಟಿಯಾಗಿದ್ದೆವು, ಈಗ ಖುಷಿಯಾಗಿದ್ದೇವೆ**"** ಎಂದು ತಮ್ಮ ಬದುಕಿನ ಕಥೆಯನ್ನು ಹೇಳುತ್ತಾ ಕಣ್ಣೀರಾಗುತ್ತಾರೆ ಮಹದೇವಿ. ಅವು ಖಂಡಿತಾ ಆನಂದದ ಕಣ್ಣೀರು.

**ವಿಳಾಸ:**
ಮಹದೇವಿ ಗಣಪತಿ ಆರೇರ
ನೆರೆಬೈಲು
ಶಿರಸಿ ತಾಲ್ಲೂಕು